ಪದ್ಯದ ಪ್ರಾರಂಭದಲ್ಲಿಯೇ ಒಂದರ ಮೇಲೊಂದು ಎಂಬ ರೀತಿಯಲ್ಲಿ ಸೇರಿಸಲ್ಪಟ್ಟ ಮುಷ್ಟಿಗಳನ್ನು 'ಮೂಡೆ' ಎಂದು ಕರೆಯುತ್ತ, 'ಇದು ಯಾತರದು? ಇದು ಯಾತರದು?' ಎಂದು ಪ್ರಶ್ನೆ ಹಾಕುವಲ್ಲಿಯೇ ಪದ್ಯದ ಧಾಟಿ ರೂಪಕದ ದಾರಿಯದು ಎಂಬುದು ಗೊತ್ತಾಗುತ್ತದೆ. ಉದ್ದಿನ ಮೂಟೆ ಉಳ್ಳೀ ಮೂಟೆ ಅಲಸಂದೆ ಮೂಟೆ ಎಂದು ಹೇಳುವಾಗ ಅವೆಲ್ಲ ವ್ಯವಸಾಯ ಕುಟುಂಬದ ಮನೆಯ ಮಗುವಿಗೆ ನಿತ್ಯ ಕಣ್ಣಿಗೆ ಬೀಳುವ ವಸ್ತು ಪರಿಕರಗಳೇ ಆಗಿವೆ. ಆದರೆ, ಆ ಕಾಳುಗಳು ಜೀವಮೂಲಗಳ ವೈವಿಧ್ಯತೆಯ ಪ್ರತಿರೂಪಗಳೇ ಸರಿ. ಅವು ಕಾಳುಗಳು, ಒಡಕಲಲ್ಲ. 'ಕೂಡಿರಲಿ ಬಾಳು ಇಡಿ ಗಾಳಿನಂತೆ, ಮಾಡದಿರು ಅದನು ಬೇಳೆಯಂತೆ' ಎಂದು ಕವಿವಾಣಿ ಹೇಳುವುದನ್ನು ಇಲ್ಲಿ ನೆನಪಿಸಿಕೊಂಡರೆ ಕಾಳಿನ ಮಹತ್ವ ಹಾಗೂ ಬೇಳೆಯ ಅನ್ಯತ್ವ ಎರಡರ ಭಿನ್ನತೆಯ ನೆಲೆಯ ಅನುಭವ ವಿಸ್ತಾರ ಅರಿವಿಗೆ ಬರುತ್ತದೆ. ಇಂಥ ಕಾಳಿನ ಮೂಡೆಗಳಿಗೆ ಎರಡು ಬಗೆಯ ಅಂತ್ಯಗಳಿವೆ. ಆದರೆ, ಅಲ್ಲಿಯ ಆಶಯ ನಮ್ಮ ಧೋರಣೆಯ ಅಂತ್ಯವಲ್ಲ. ಅದು ಶಿವನ ನಿಸರ್ಗ ಸಹಜ ಅಂತ್ಯದ ಆಯ್ಕೆಯಾಗಿದೆ. ಇದು ಮುಖ್ಯ. ಅದಾದ ಮೇಲೆ ಕೇಳುವ ಪ್ರಶ್ನೆ – ಕೈಯೆಲ್ಲ ಎತ್ಲಾಗೋದು? ಇದು ಪ್ರತಿ ಜೀವದ ಕಣ್ಮರೆಯ ಹೊತ್ತಿನಲ್ಲಿ ಇಡೀ ಮನುಷ್ಯ ಕುಲ ಕೇಳಿಕೊಂಡು ಬಂದ ಪ್ರಶ್ನೆಯೇ ಆಗಿದೆ. ಆದರೆ, ಅದಕ್ಕೆ ಕೊಡುವ ಉತ್ತರ ಮಾತ್ರ ಲೋಕೋತ್ತರವಾದುದಲ್ಲ; ಲೋಕ ಮಾನ್ಯವಾದುದು. ಅಂದರೆ ಜೀವನದ ನಂತರ, ಅರ್ಥಾತ್ ಸತ್ತ ನಂತರ ಜೀವ ಏನಾಯಿತು? ಎಲ್ಲಿಗೆ ಹೋಯಿತು? ಎಂಬ ಪ್ರಶ್ನೆಗೆ ಕೊಡುವ ಯಾವ ಉತ್ತರವೂ ಅದು ಊಹೆ–ಕಲ್ಪನೆಗಳ ಸಟೆಯ ಉತ್ತರವೇ ಆಗಿದೆ. ಆದ್ದರಿಂದಲೇ ಈ ಪದ್ಯ, ಅದಕ್ಕೆ ಕೊಡುವ ಉತ್ತರ 'ಸಂತೆಗೆ ಹೋದ್ವು' ಎಂಬ ಮರ್ತ್ಯಲೋಕದ ಕರ್ತಾರನ ಕಮ್ಮಟದ ಉತ್ತರವೇ ಆಗಿದೆ. ಸಾವಿನ ಬಗ್ಗೆ ಏನೂ ಹೇಳದೆ ಬಾಳುವೆಯ ಬಗ್ಗೆ ಹೇಳುತ್ತಲೇ ಬಾಳಿನ ಗತಿಶೀಲತೆಯನ್ನು ತಿಳಿಸುವಾಗ, ಅದೂ ಮತ್ತೆ ಸಾವಿನ ಸರಪಳಿಯ ಅರ್ಥಾತ್ ಜೀವ ಸರಪಳಿಯ ಹುಟ್ಟು ಸಾವಿನ ಗತಿತಾರ್ಕಿಕ ವರ್ತನಾ ವ್ಯಾಪಾರವನ್ನು ಅಧ್ಯಾಹಾರ ಭಾವದಲ್ಲಿ ನಿವೇದಿಸುತ್ತಿದೆ. ಸಂತೆಯಲ್ಲಿ ಕೊಂಡು ತರುವ ಬಾಳೆ, ಅದನ್ನು ತಿನ್ನುವ ಬಗೆ, ಅಲ್ಲಿ ಕೊಡುವ ಪಡೆವ ನಿಸರ್ಗ ನಡೆಯ ಭೂಮಿತತ್ವವನ್ನು ಕವಿತೆ ಧ್ವನಿಸುತ್ತಿದೆ. ಜಡವನ್ನು ತಿಂದು ಯಾವ ಜೀವವೂ ಬದುಕಲಾರದು. ಜೀವವನ್ನು ತಿಂದು ಜೀವ ಬದುಕುವುದೇ ನಿಸರ್ಗ ತತ್ವ. 'ಜಡವೆಂಬುದು ಬರಿ ಸುಳ್ಳು' ಎಂಬ ಸತ್ಯವನ್ನು ಇಲ್ಲಿನ ಪದ್ಯ ಸಾರಿ ಹೇಳುತ್ತಿದೆ.

ಸಿಪ್ಪೆಯನ್ನು ಕದದ ಹಿಂದ್ಹಾಕ್ದೆ ಎಂಬ ಉತ್ತರ, ಅದಕ್ಕೆ ಹುಟ್ಟುವ ಮರುಪ್ರಶ್ನೆ, ಅದಕ್ಕೆ ಕೊಡುವ ಚಕ್ಕೆ ಕೊಡ್ತು ಎಂಬ ಉತ್ತರ, ಇವೆಲ್ಲ ಈ ಜಡದ ಹಿಂದಿನ ಜೈವಿಕ ಕ್ರಿಯೆಯ ರಾಸಾಯನಿಕ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಹೇಳುತ್ತಿವೆ. ಕದ ಕೊಡುವ ಚಕ್ಕೆ ಜಡವೆಂದಾದರೆ, ಅದಕ್ಕೆ ಮರುಜೀವ ಕೊಡುವ ಕ್ರಿಯೆ ಒಲೆಗೆ ಉರುವಲಾಗಿ ಬಳಸುವುದು. ಸುಟ್ಟು ಬೂದಿಯಾಗಿಸುವುದು. ಬೂದಿ ತಿಪ್ಪೆಗೆ ಬಿದ್ದಾಗ ಅದು ಗೊಬ್ಬರ. ಗೊಬ್ಬರ ಗದ್ದೆಗೆ ಹಾಕಿದಾಗ ಅದು ಮರುಜೀವ ಪೋಷಕ ರಾಸಾಯನಿಕ. ಹೀಗೆ ಈ ಪ್ರಶ್ನೆ–ಉತ್ತರಗಳ ಪ್ರಕ್ರಿಯೆ ನಿಸರ್ಗ ಧರ್ಮಕ್ಕೆ ಎರವಾಗದ ತಿಳಿವಳಿಕೆಯ ಹಾದಿಯಲ್ಲಿ ನಡೆದ ಅನುಭವ ಸಾರ. ಇಡೀ ಪದ್ಯವೇ ಹುಟ್ಟು–ಸಾವುಗಳ ನಡುವಿನ ಜೀವ–ಜೀವನ ಸಂಬಂಧವನ್ನು ಯಾವ ಸೋಗೂ ಇಲ್ಲದ ಸರಳ ನಿದರ್ಶನಗಳ ಉಲ್ಲೇಖಗಳಲ್ಲಿ ನಿರೂಪಿಸಿದೆ. ಇದು ಮಕ್ಕಳ ಪದ್ಯ. ಮಕ್ಕಳ ಗ್ರಹಣಶಕ್ತಿಯನ್ನು ತೀಕ್ಷ್ಣಗೊಳಿಸುತ್ತಲೇ ನೆನಪಿನ ಭಾಗವಾಗಿ ಭಾಷೆಯ ಪದಗಳನ್ನು, ಪಾರಿಭಾಷಿಕ ಪದಗಳನ್ನು ಕಲಿಯುವ ಕಲಿಸುವ ಕೆಲಸವನ್ನು ಮಾಡುತ್ತಿದೆ. ಇದೊಂದು ಸೃಜನಶೀಲ ಗುಣವಾಗಿ, ಮಕ್ಕಳ ಭಾವಕೋಶದ ಭಾಗವಾಗಿ, ಭಾಷಿಕ ನುಡಿಗಟ್ಟಿನ ನೆಲವಾಗಿ, ನೆಲಮೂಲ ಪ್ರಜ್ಞೆಯಾಗಿ ಅರಳುತ್ತಿದೆ. ಅನ್ನ–ಹಾಲಿನ ಸಂಬಂಧ ಹೇಳುತ್ತಲೇ ಹಾಲಿನ ಉಪಯೋಗದ ವಿಚಾರಗಳನ್ನು ಇಷ್ಟು ಸೊಗಸಾಗಿ ಹೇಳಲು ಸಾಧ್ಯವೇ ಎಂಬ ಬೆರಗಿನಲ್ಲಿ ಬೆಳೆದಿದೆ. ಇದು ಶಿಕ್ಷಣದ ಮಾದರಿ. ಶಿಕ್ಷಣವೆಂದರೆ ವಿಷಯವನ್ನು ಹೇರುವುದಲ್ಲ, ಜ್ಞಾನವನ್ನು ಹೇಳುವುದು, ಜ್ಞಾನವು ಒಂದು ಸೃಜನ ಪ್ರಕ್ರಿಯೆ. ಜ್ಞಾನವು ಸೃಜನಶೀಲವಾದಾಗ ವ್ಯಕ್ತಿ ಚೇತನ ಹೊಸ ಆವಿಷ್ಕಾರಗಳ ಕ್ರತುಪ್ರಜ್ಞೆ ಬೆಳೆಸಿಕೊಳ್ಳಬಲ್ಲ.

ಹೀಗೆ ಇಡೀ ಪದ್ಯ ವಿವರಿಸಿದಷ್ಟೂ ವಿಷಯ ವಿಸ್ತಾರ ಗುಣ ಸಂಪನ್ನತೆಯಿಂದ ಒಂದು ಧ್ವನಿಪೂರ್ಣ